ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 2, Sep-Oct, 138-143
©*IIMRD*, Mysuru

IIMRD JOURNALS
www.iimrd.com

# ಇರುಳಿಗ ಬುಡಕಟ್ಟು ಸಮುದಾಯದ ನಾಟಿ ವೈದ್ಯಕೀಯ ಪದ್ಧತಿ

**ದಿನೇಶ ಕೆ. ಡಿ* ; ಪ್ರೊ. ಎಂ. ಆರ್. ಗಂಗಾಧರ್****

*ಸಂಶೋಧನಾ ವಿದ್ಯಾರ್ಥಿ; **ಪ್ರಾಧ್ಯಾಪಕರು.
ಮಾನವಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು.

***ಸಾರಾಂಶ* (Abstract)**

*ಜಗತ್ತಿನಲ್ಲಿರುವ ಬಹುತೇಕ ಸಂಸ್ಕೃತಿಗಳನ್ನು ಅಧ್ಯಯನ ಮಾಡಿದಾಗ ಆ ಸಂಸ್ಕೃತಿಯ ಮೇಲೆ ಅಲ್ಲಿನ ಪರಿಸರವು ತನ್ನದೇ ಪ್ರಭಾವವನ್ನು ಬೀರಿರುತ್ತದೆ. ಭಾರತದ ದಟ್ಟವಾದ ಅರಣ್ಯ ಪ್ರದೇಶಗಳಲ್ಲಿ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ರೀತಿಯಲ್ಲಿ ಬದುಕನ್ನು ಕಳೆಯುತ್ತಿವೆ. ಹಾಗಾಗಿಯೇ ಕರ್ನಾಟಕ ರಾಜ್ಯದಲ್ಲಿಯೂ ಸಹ ಅನೇಕ ಬುಡಕಟ್ಟು ಸಮುದಾಯಗಳಿದ್ದು, ಪ್ರಸ್ತುತ ಲೇಖನದಲ್ಲಿ ಇರುಳಿಗ ಬುಡಕಟ್ಟು ಸಮುದಾಯದ ನಾಟಿವೈದ್ಯ ಪದ್ಧತಿಯ ಬಗ್ಗೆ ವಿವರಿಸಲಾಗಿದೆ.*

***ಮುಖ್ಯಪದಗಳು* (Keywords):** ಇರುಳಿಗ, ನಾಟಿ/ಜನಾಂಗೀಯ ವೈದ್ಯಕೀಯ ಪದ್ಧತಿ, ಬುಡಕಟ್ಟು ಸಂಸ್ಕೃತಿ.

**ಪೀಠಿಕೆ**

ಹಿಂದುಳಿದ ಬುಡಕಟ್ಟು ಸಮುದಾಯಗಳಲ್ಲಿ ಇರುಳಿಗ ಬುಡಕಟ್ಟು ಸಮುದಾಯವೂ ಒಂದಾಗಿದೆ. ಇವರು ತಮ್ಮದೇ ಆದ ಸಂಪ್ರದಾಯ, ಆಹಾರ ಪದ್ಧತಿ, ಮಂತ್ರ–ತಂತ್ರ, ನಂಬಿಕೆ–ಆಚರಣೆ, ಕುಟುಂಬ, ಹಬ್ಬಹರಿದಿನ, ಮನರಂಜನೆ ಹಾಗೂ ಬಹುಮುಖ್ಯವಾಗಿ ನಾಟಿ ವೈದ್ಯ ಪದ್ಧತಿಯನ್ನು ಹೊಂದಿದ್ದಾರೆ. ಇವರು ಕರ್ನಾಟಕದ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ವ್ಯಾಪಕವಾಗಿದ್ದಾರೆ. ಇರುಳಿಗ ಬುಡಕಟ್ಟು ಜನಾಂಗದವರು ಅನಾರೋಗ್ಯಕ್ಕೊಳಗಾದಾಗ ಸ್ಥಳೀಯವಾಗಿ ದೊರೆಯುವ ಗಿಡಮೂಲಿಕೆಗಳನ್ನು ಬಳಸಿ ನಾಟಿ ಔಷದದ ಮೂಲಕ ಗುಣಪಡಿಸಿಕೊಳ್ಳುತ್ತಾರೆ. ಇರುಳಿಗರು ಹಿಂದಿನಿಂದಲೂ ಸಸ್ಯಜನ್ಯ, ಪ್ರಾಣಿಜನ್ಯ ಹಾಗೂ ಬೌದ್ಧಿಕ ವಸ್ತುಗಳನ್ನು ತಮ್ಮ ಚಿಕಿತ್ಸೆಯಲ್ಲಿ ಬಳಸುತ್ತಾರೆ.

ಇರುಳಿಗ ಬುಡಕಟ್ಟು ಸಮುದಾಯದವರು ಸದಾ ಕಾಲ ಅರಣ್ಯದ ಒಳಗೆ ಮತ್ತು ಅರಣ್ಯದ ಅಂಚಿನಲ್ಲಿರುವುದರಿಂದ ಇವರು ಪರಿಸರದ ಮಕ್ಕಳಾಗಿದ್ದಾರೆ. ಮೊದಲು ಅವರು ವಾಸಿಸುವ ಪ್ರದೇಶಗಳಿಗೆ ಬೇಟಿ ನೀಡಿ ವೈದ್ಯಕೀಯ ಪದ್ಧತಿ ಬಗ್ಗೆ ಕೇಳಿದಾಗ "ನೀವು ನಾಡಿನ ಜನ, ನಮ್ಮ ಹತ್ತಿರ ಕೇಳಿಕೊಂಡು ಹೋಗಿ ನಂತರ ನೀವು ದುಡ್ಡು ಮಾಡಿಕೊಳ್ಳುತ್ತೀರಾ, ನಮಗೆ ರೊಕ್ಕಾ ಕೊಟ್ಟರೆ ಮಾತ್ರ ಹೇಳುತ್ತೇವೆ ಎಂದರು, ಇನ್ನು ಕೆಲವರು ನಾಡಿನ ಮಂದಿಗೆ ಇದರ ಬಗ್ಗೆ ಹೇಳಿದರೆ; ನಮಗೆ ಮರೆತು ಹೋಗುತ್ತದೆ.

*Please cite this article as: ದಿನೇಶ ಕೆ. ಡಿ ; ಎಂ. ಆರ್. ಗಂಗಾಧರ್. (2021).* ಇರುಳಿಗ ಬುಡಕಟ್ಟು ಸಮುದಾಯದ ನಾಟಿ ವೈದ್ಯಕೀಯ ಪದ್ಧತಿ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 138–143*

ಇದರಿಂದ ನಾವು ನಂಬಿರುವ ದೇವರ ನಮ್ಮೊಂದಿಗೆ ಮುನಿಸಿಕೊಳ್ಳುತ್ತಾನೆ" ಎನ್ನುತ್ತಾರೆ. ಇದು ಅವರ ಮುಗ್ಧತೆ ಹಾಗೂ ಅಮಾಯಕತೆಯನ್ನು ವ್ಯಕ್ತಪಡಿಸುತ್ತದೆ.

ಕಾಡು ನೈಸರ್ಗಿಕ ಸಂಪನ್ಮೂಲ. ಈ ಸಂಪನ್ಮೂಲದಲ್ಲಿ ಹಲವು ಬಗೆಯ ಜ್ಞಾನ ಭಂಡಾರಗಳು ಹಾಗೂ ಶಾಖೆಗಳು ಅಡಗಿವೆ. ಅಂತಹವುಗಳಲ್ಲಿ ಗಿಡಮೂಲಿಕೆಗಳಿಂದ ಅನೇಕ ರೂಪದ ರೋಗಗಳನ್ನು ಗುಣಪಡಿಸುವಂತಹ ವೈದ್ಯಕೀಯ ಜ್ಞಾನಸಂಪತ್ತು ಅತಿ ಅಮೂಲ್ಯವಾಗಿದೆ. ಪ್ರಸ್ತುತ ಕಾಲಘಟ್ಟದಲ್ಲಿ ಇಂತಹ ಜ್ಞಾನಸಂಪತ್ತು ತಿಳಿದಿರುವ ಅಥವಾ ಪಡೆದಿರುವ ವ್ಯಕ್ತಿಗಳ ಸಂಖ್ಯೆಯೂ ತುಂಬಾ ವಿರಳವಾಗಿರುತ್ತದೆ. ಹಾಗಾಗಿ ಇರುಳಿಗ ಬುಡಕಟ್ಟು ಸಮುದಾಯದವರ ನಾಟಿವೈದ್ಯ ಪದ್ಧತಿಯ ಜ್ಞಾನವನ್ನು ಸಂರಕ್ಷಿಸಬೇಕಿದೆ.

ಆದರೆ ನಾಟಿ ವೈದ್ಯರಾಗಿ ತಾವು ವಂಶಪರಂಪರ್ಯಾವಾಗಿ ಪಡೆದಿರುವ ಜ್ಞಾನವನ್ನು ಹಾಗೆಯೇ ಅದರ ಬಗೆಗಿನ ಮಾಹಿತಿಯನ್ನು ಬೇರೆಯವರಿಗೆ ತಿಳಿಸಬಾರದೆಂಬ ಅಲಿಖಿತವಾದ ಕಾನೂನು ಅವರಲ್ಲಿ ಬಹಳ ಕಟ್ಟುನಿಟ್ಟಾಗಿ ಚಾಲ್ತಿಯಲ್ಲಿರುವುದು ಗೋಚರವಾಗುತ್ತದೆ. ಇಂತಹ ಕಟ್ಟಾ ಸಂಪ್ರದಾಯಸ್ಥ ಇರುಳಿಗ ಬುಡಕಟ್ಟು ಜನಾಂಗದವರು ತಮ್ಮ ಮನೆಯ ಕೆಲವು ಹೆಣ್ಣಮಕ್ಕಳಿಗೂ ಈ ನಾಟಿವೈದ್ಯ ವಿದ್ಯೆಯನ್ನು ಹೇಳಿಕೊಟ್ಟಿರುವುದು ಉಂಟು. ಆದ್ದರಿಂದ ಈ ಇರುಳಿಗರಲ್ಲಿ ಮಹಿಳಾ ನಾಟಿವೈದ್ಯರು ಕೆಲವು ಪೋಡುಗಳಲ್ಲಿ ಇರುವುದು ಈ ಅಧ್ಯಯನದಿಂದ ಕಂಡುಬಂದಿರುತ್ತದೆ.

ಇರುಳಿಗರಲ್ಲಿ ವಯಸ್ಸಾದ ಅಥವಾ ವಯೋವೃದ್ಧ ನಾಟಿವೈದ್ಯ ಮತ್ತು ಮಧ್ಯ ವಯಸ್ಸಿನ ನಾಟಿ ವೈದ್ಯರಲ್ಲಿ ಭಿನ್ನತೆಗಳನ್ನು ಗುರುತಿಸಬಹುದು. ಮಧ್ಯಮ ವಯಸ್ಸಿನ ನಾಟಿ ವೈದ್ಯರು ಸಂಪ್ರದಾಯತ್ವವನ್ನು ಬಿಗಿಗೊಳಿಸುವಂತಹ ಮನಸ್ಥಿತಿಯಿಂದ ಸ್ವಲ್ಪಮಟ್ಟಿಗೆ ಹೊರ ಬಂದಿದ್ದಾರೆ. ಆದರೆ, ಹಿರಿತನದ ನಾಟಿವೈದ್ಯರು ತಮ್ಮ ಜ್ಞಾನದ ವರ್ಗಾವಣೆಗೆ ಮಾನಸಿಕವಾಗಿ ಸಿದ್ಧರಿರುವುದಿಲ್ಲ. ಆದರೆ ಇವರು ತಮ್ಮ ಕುಟುಂಬ ವರ್ಗದವರನ್ನು ಹೊರತುಪಡಿಸಿ, ಮತ್ಯಾರಿಗೂ ಈ ನಾಟಿ ವೈದ್ಯ ಪದ್ಧತಿಯ ಸಂಸ್ಕೃತಿ ವಿದ್ಯೆಯನ್ನು ಕಲಿಸುವುದಿಲ್ಲ. ಹೀಗಿದ್ದರೂ ಕೂಡ ನಾಗರಿಕತೆಯ ಸೋಂಕು ನಾಟಿ ವೈದ್ಯರ ಮೇಲೂ ಹರಡಿದೆ ಎಂಬುದನ್ನು ಪ್ರತ್ಯಕ್ಷವಾಗಿ ಕಂಡುಕೊಳ್ಳಲಾಗಿದೆ.

ಪೂರ್ವಜರಿಗೆ ಈ ಜ್ಞಾನದ ಸಂಗ್ರಹ, ಪರಿಶೋಧನೆಯ ಪ್ರವೃತ್ತಿ ಹೆಚ್ಚು–ಹೆಚ್ಚು ಅರಿಯಬೇಕೆಂಬ ಆಕಾಂಕ್ಷೆ ಸಹಜವಾಗಿಯೇ ಇದ್ದು, ಇದು ಮನುಷ್ಯನ ಶರೀರ ಮತ್ತು ಮನಸ್ಸಿನ ಬಗ್ಗೆ ಅವುಗಳ ಆರೋಗ್ಯ, ಅನಾರೋಗ್ಯದ ಬಗ್ಗೆ ಹೆಚ್ಚಿನ ಚಿಂತನೆಯನ್ನು ಮಾಡುವಂತೆ ಪ್ರೇರೇಪಿಸಿರುತ್ತದೆ. ಮನುಷ್ಯ ಹುಟ್ಟಿದ ದಿನದಿಂದಲೇ ಅವನ ಜೊತೆಗೆ ಬೆಳೆದುಕೊಂಡು ಬಂದಿರುವುದು ಅನಾರೋಗ್ಯ. ಆದ್ದರಿಂದಲೇ ಆದಿ–ಮಾನವನಲ್ಲೂ ಆರೊಗ್ಯ ಮತ್ತು ರೋಗದ ಬಗ್ಗೆ ಒಂದು ಪರಿಕಲ್ಪನೆ ಇದ್ದೇ ಇರುತ್ತದೆ. ಈ ಪರಿಣಾಮದಿಂದಾಗಿ ಕಾಡಿನಲ್ಲಿ ಸಿಗುವಂತಹ ವಿವಿಧ ಸ್ವರೂಪದ ಹಾಗೂ ರೀತಿಯ ಸಸ್ಯಜನ್ಯಗಳ ಬೇರು, ಎಲೆ, ಹಣ್ಣು, ಕಾಯಿ, ಕಾಂಡ, ಮರಗಳ ತೊಗಟೆಗಳನ್ನು, ಪ್ರಾಣಿಜನ್ಯಗಳ ಚರ್ಮ, ಮೂಳೆಯಂತಹ ಪ್ರಾಣಿಗಳ ಅವಶೇಷಗಳಿಂದ, ಭೌತಿಕ ವಸ್ತುಗಳನ್ನು ಹುಡುಕಿ ರೋಗ–ರುಜಿನಗಳನ್ನು ಗುಣಪಡಿಸಲು ಪ್ರಯತ್ನಿಸುತ್ತಿದ್ದರು. ಅದು ತಲೆಮಾರಿನಿಂದ ತಲೆಮಾರಿಗೆ ಬಂದಿರುವ ಪಾರಂಪರಿಕ ನಾಟಿ ವೈದ್ಯ ಸಂಸ್ಕೃತಿಯೂ ಒಂದು ಪದ್ಧತಿಯಾಗಿ ರೂಪುಗೊಂಡಿರುತ್ತದೆ.

ಇರುಳಿಗರು ದಟ್ಟವಾದ ಅರಣ್ಯಗಳಲ್ಲಿ ಜೀವನವನ್ನು ಸಾಗಿಸುತ್ತಿರುವ ಸಮಯ ಹಾಗೂ ಸನ್ನಿವೇಶಗಳಲ್ಲಿ ಹಾಗೆಯೇ ದೈನಂದಿನ ಚಟುವಟಿಕೆಗಳಲ್ಲಿ ವ್ಯತ್ಯಯವು ಉಂಟಾದಾಗ ಆಕಸ್ಮಿಕವಾಗಿ ಬಿದ್ದು, ಪ್ರಾಣಿಗಳು ಕಚ್ಚಿ ಅಥವಾ ತಿವಿದು, ಪರಸ್ಪರರಲ್ಲಿ ಕಾದಾಟ ನಡೆದಂತಹ ಸಂದರ್ಭಗಳಲ್ಲಿ ವ್ರಣ(ಗಾಯ) ಉಂಟಾದಾಗ ಅಥವಾ ಕಾಡಿನಲ್ಲಿಯೇ ಹೆಚ್ಚಿನದಾಗಿ ವಾಸಿಸುವಾಗ ಶಾರೀರಿಕ ಅನಾರೋಗ್ಯ ಉಂಟಾದಾಗ ಇವರಿಗೆ ಬೇಟೆಯಾಡಲು, ಆಹಾರ ಸಂಗ್ರಹಿಸಲು, ಓಡಲು, ನಡೆಯಲು ತೊಂದರೆಯಾದರೆ ಸಾಕು, ಸ್ವಾಭಾವಿಕವಾಗಿಯೇ ಅವರು ಈ ವ್ಯತ್ಯಯವನ್ನು ನಿವಾರಿಸಲು ಏನಾದರೂ ಉಪಾಯವನ್ನು ಹುಡುಕಲು ಯೋಚಿಸಿರುತ್ತಾರೆ. ಅದೇ ಕಾರಣ ಹಾಗೂ ಪರಿಣಾಮದಿಂದಾಗಿಯೇ ಇವರು ಕಾಡಿನಲ್ಲಿ ತನ್ನ ಸುತ್ತ ಮುತ್ತಲ್ಲಿನ ಪರಿಸರದಲ್ಲಿ ವಸ್ತುಗಳನ್ನು ತಮಗೆ ಒದಗಿ ಬರುವ ಹಾಗೂ ಬಂದಿರುವ ರೋಗ–ರುಜಿನಗಳನ್ನು ಪರಿಹರಿಸಿಕೊಳ್ಳಲು ಬಳಸಿರುತ್ತಾರೆ. ಇದರಿಂದ ಗುಣಮುಖರಾಗಿರುವುದನ್ನು ಅರಿತಿರುವ ಜ್ಞಾನವಂತ ಇರುಳಿಗರು ಅದನ್ನೇ ಮುಂದುವರೆಸಿಕೊಂಡು ಬಂದಿರುತ್ತಾರೆ. ಹಾಗಾಗಿಯೇ ಅಲ್ಲಿಂದ ನಾಟಿ ವೈದ್ಯ ಪದ್ಧತಿಯ ಸಂಸ್ಕೃತಿ ಹುಟ್ಟಿತೆಂದು ಕೆಲವು ಹಿರಿಯ ತಲೆಮಾರಿನ ಇರುಳಿಗರ ನಾಟಿ ವೈದ್ಯ ತಜ್ಞರು ತಿಳಿಸಿದರು.

ಇರುಳಿಗರ ಸಂಸ್ಕೃತಿ, ಆಚಾರ, ವಿಚಾರಗಳಿಗೆ ಯಾವುದೇ ರೀತಿಯಲ್ಲಿಯೂ ಅಪಚಾರವಾಗದೇ ಹಾಗೂ ದಕ್ಕೆಯಾಗದಂತೆ ಅದನ್ನು ಕಾಯ್ದುಕೊಂಡು ಬರಲಾಗಿದೆ. ಹಾಗೆಯೇ ಇರುಳಿಗರು ಸೂಚಿಸಿರುವ ಕೆಲವೊಂದು ಔಷಧಿಯುಕ್ತ ಗಿಡಮೂಲಿಕೆಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

**ಪಟ್ಟಿ 1: ಇರುಳಿಗರು ಬಳಸುವ ಗಿಡಮೂಲಿಕೆಗಳ ವಿವರ**

| | |
|---|---|
| ಕಾಡು ಮೆಣಸಿನ ಗಿಡದ ಬೇರು | ಹೊಟ್ಟೆ ನೋವಿಗೆ ದಿವ್ಯೌಷಧಿ, ಅಂಟುವಾಳದ ಕಾಯಿ, ಗಂಟು ಸೀಗೆಕಾಯಿ ಮತ್ತು ಅಂಚಿಗೆಡ್ಡೆಗಳು ಗಂಟಲುನೋವು ಅಥವಾ ಮೆಟರೆಗಟ್ಟು ಬಂದಿದ್ದರೆ ಅದಕ್ಕೆ ಒಳ್ಳೆಯ ಔಷಧಿಗಳಾಗಬಲ್ಲವು. |
| ಈಶ್ವರಿ ಬೇರು | ಬಡಗದ್ದ ಮತ್ತು ಗಂಟಲು ನೋವಿಗೆ ಒಳ್ಳೆಯ ಔಷಧಿ. ಕಾಡುಬೆಕ್ಕಿನ ಪುನಗನ್ನು ಅರಿಶಿನ ಹಚ್ಚಿ ಇಟ್ಟುಕೊಂಡರೆ ಕಣ್ಣಿನ ಖಾಯಿಲೆಯಾದ ಅರುಸ್ಥಿ (ಆರ್‌ಸ್ಥಿ)ಗೆ ಒಳ್ಳೆಯ ಔಷಧಿಯಾಗುತ್ತದೆ. |
| ತೊಳಚಿ ಮಾರಿಗೆಡ್ಡೆ | ಇದರ ಎಲೆಗಳನ್ನು ಕಿತ್ತುಕೊಂಡು ನೊಣದ ಜಾತಿಯ ತೊಳಚಿಯನ್ನು ಮುದುರಿಡಿದುಕೊಂಡರೆ ಸಾಯುತ್ತದೆ. ಹಸುಗಳು ಇರುವ ಕೊಟ್ಟಿಗೆಯಲ್ಲಿ ಗೆಡ್ಡೆಯ ಹೊಗೆ ಹಾಕಿದರೆ ಯಾವುದೇ ಕ್ರಿಮಿ–ಕೀಟಗಳು ಇದ್ದರೂ ನಾಶವಾಗುತ್ತದೆ. |
| ಹೇನು ಮಾರಿಗೆಡ್ಡೆ | ತಲೆಯಲ್ಲಿ ಬರುವ ಹೇನುಗಳನ್ನು ನಾಶಮಾಡಲು ಸಹಾಯಕಾರಿಯಾಗುತ್ತದೆ. |
| ಹುಚ್ಚು ಮೆಗಟೆಗೆಡ್ಡೆ | ಹಸುವಿಗೆ ಮಠಗಾ (ದೊಡ್ಡನಾಯಿ, ಸೀಳುನಾಯಿ ಅಥವಾ ಹುಲಿ) ಕಡಿದರೆ ಇದನ್ನು ಬೇಯಿಸಿ ಶಾಖ ಕೊಟ್ಟರೆ ವಾಸಿಯಾಗುತ್ತದೆಯಂತೆ. |

| | |
|---|---|
| ರಜಮಂಡಲದ ಮರದ ಹಾಲು | ಅದರದೇ ಮುಳ್ಳನ್ನು ಕಿತ್ತು ಅದೇ ಮರದ ಬುಡಕ್ಕೆ ಚುಚ್ಚಿದರೆ ಹಾಲು ಬರುತ್ತದೆ. ಗಾಯಗಳಿಗೆ ಆ ಹಾಲು ಹಚ್ಚಿದರೆ ವಾಸಿಯಾಗುತ್ತದೆ. ಹಾಗೂ ಮನುಷ್ಯನ ಜೀವಕ್ಕೆ ಉಷ್ಣವಾದಾಗ ಅದರ ಚಕ್ಕೆಯನ್ನು ಒಣಗಿಸಿ ಪುಡಿ ಮಾಡಿ ಹಾಲಿನಲ್ಲಿ ಕುಡಿಸಿದರೆ ಉಷ್ಣ ಕಡಿಮೆಯಾಗುತ್ತದೆಯಂತೆ. |
| ಮಾಗಳಿ ಬೇರು ಮತ್ತು ನೆಲ್ಲಿಕಾಯಿ | ತಿನ್ನಲು, ಉಪ್ಪಿನಕಾಯಿ ಹಾಕಲು ಬಹಳ ಒಳ್ಳೆಯದು. |
| ಬಾವುನ ಮರದ ಚೆಕ್ಕೆ | ಕರುಗಳಿಗೆ ಬರುವ ಖಾಯಿಲೆಗಳಿಗೆ ಒಳ್ಳೆಯ ಔಷಧಿ. |
| ಮಗ್ಗರೆಕಾಯಿ | ಹಸುಗಳಿಗೆ ಬರುವ ವಿವಿಧ ಬಗೆಯ ಸೆಲೆಗಳಿಗೆ ಒಳ್ಳೆಯ ಔಷಧಿ. ಮಕ್ಕಳ ಉಚ್ಚೆಯಲ್ಲಿ ಏಳು ಕಾಯಿಗಳನ್ನು ಜಜ್ಜಿ ಪುಡಿ ಮಾಡಿ, ಕಲಸಿ ಕುಡಿಸಿದರೆ ಹೋಗಿ ಬಿಡುತ್ತದೆಯಂತೆ |
| ಇಂಗ್ಲೀಕನ ಚಕ್ಕೆ | ಚೆನ್ನಾಗಿ ಪುಡಿಮಾಡಿ ಮರಳು ಮಿಶ್ರಣಮಾಡಿ ಮಡುಗಳಿಗೆ ಎರಚಿದರೆ ಮೀನುಗಳು ಸೊಕ್ಕಿ ತೇಲುತ್ತವೆ. (ಸಾಯುವುದಿಲ್ಲ. ಮೂರ್ಛೆ ಹೋಗಿರುತ್ತವೆ.) ಆ ಮೂರ್ಛಾವಸ್ಥೆಯಲ್ಲಿರುವ ಮೀನುಗಳನ್ನು ಹಿಡಿದು ಆಹಾರಕ್ಕೆ ಬಳಸುತ್ತಾರೆ. |
| ಕರಪಾಲದ ಚೆಕ್ಕೆ | ಉಳುಕು ಮತ್ತು ನೋವುಗಳಿಗೆ ದಿವ್ಯೌಷಧಿ, ಚೆನ್ನಾಗಿ ಪುಡಿಮಾಡಿ ಬಿಸಿನೀರಿನಲ್ಲಿ ಮಳ್ಳಿಸಿ (ಕುದಿಸಿ) ಹಾಕಿದರೆ ಉಳುಕು ಅಥವಾ ಹಳೆಯ ನೋವುಗಳು ಉಪಶಮನವಾಗುತ್ತವೆ. |
| ತಪಾಲದ ಚಕ್ಕೆ ಮತ್ತು ಕೆಮ್ಮಣು | ಇವುಗಳ ಮಿಶ್ರಣಕ್ಕೆ ನೀರನ್ನು ಸೇರಿಸಿ ಚೆನ್ನಾಗಿ ಕುದಿಸಿ ಗಟ್ಟಿಯಾದ ಮೇಲೆ ಉಳುಕಿರುವ ಕೀಲುಗಳಿಗೆ ಬಿದಿರು ದೆಬ್ಬೆಗಳನ್ನಿಟ್ಟು ಬಟ್ಟೆಗೆ ಸೇರಿಸಿ ಬಿಗಿದು ಕಟ್ಟಿದರೆ ವಾಸಿಯಾಗುತ್ತದೆ. ಹಸು, ಕೋಳಿ, ಎಮ್ಮೆ ಮತ್ತು ಮನುಷ್ಯರಿಗೆ ಎಲ್ಲರಿಗೂ ಈ ಚಿಕಿತ್ಸೆಯನ್ನು ಮಾಡಬಹುದು. |
| ಕೋಳಿಕಾಲು ಸೊಪ್ಪು | ಒತ್ತಲೆ ನೋವಿಗೆ ಒಳ್ಳೆಯ ಔಷಧ, ಮೆಣಸು, ಬೆಳ್ಳುಳ್ಳಿ, ಉಪ್ಪು ಚೆನ್ನಾಗಿ ಹಿಸುಕಿ (ಇಚುಕಿ) ಕಿವಿಗೆ ಬಿಟ್ಟರೆ ಒತ್ತಲೆ ನೋವಿನಿಂದ ಮುಕ್ತಿ ಪಡೆಯಬಹುದುಕೀಲುಗಳು ಹಿಡಿದುಕೊಂಡವರಿಗೆ ನಡೆದಾಡುವುದು ಕಷ್ಟವಾಗಿರುತ್ತದೆ. ಅಂಥವರು ಕೋಳಿಕಾಲು ಸೊಪ್ಪಿನ ಮುಸೊಪ್ಪು ಮಾಡಿ ಊಟ ಮಾಡಿದರೆ ವಾಸಿಯಾಗುತ್ತದೆ ಎನ್ನುತ್ತಾರೆ. |
| ಹೊಟ್ಟೆಸುಗ್ಗನ ಗೆಡ್ಡೆ | ಆಮಶಂಕೆಗೆ ಸುಟ್ಟ ಗೆಡ್ಡೆಯನ್ನು ಉಪಯೋಗಿಸಿದರೆ (ತಿಂದರೆ) ನಿಲ್ಲುತ್ತದೆ. |
| ಚಪ್ಪರ ಬದನೇ | ಉಗುರು ಕಣ್ಣಿನಲ್ಲಿ ಆಗುವ ಅರಪ ಎಂಬ ಕೀವು ತುಂಬಿಕೊಂಡು ಬಹಳ ಬಾಧೆ |

| | |
|---|---|
| ಸೊಪ್ಪು | ಕೊಡುವ ರೋಗಕ್ಕೆ ಒಳ್ಳೆಯ ಔಷಧ. ಒಂದಿಷ್ಟು ಸೊಪ್ಪು, ಅರಿಸಿನ, ಹಸುವಿನ ಬೆಣ್ಣೆ ಇಷ್ಟನ್ನೂ ಚೆನ್ನಾಗಿ ಅರೆದು ಅರಪ ಆಗಿರುವ ಭಾಗಕ್ಕೆ ಕಟ್ಟಿಬಿಡುವುದು. ವಾಸಿಯಾಗುವ ತನಕ ಪ್ರತೀ ದಿನ ಸ್ವಚ್ಚಗೊಳಿಸಿ, ಬದಲಾಯಿಸುತ್ತಿರಬೇಕು. |
| ದತ್ತೂರಿ ಗಿಡದ ಹಾಲು ಮತ್ತು ಕಾಯಿ | ಕುರುವಾಗಿದ್ದರೆ ದತ್ತೂರಿ ಕಾಯಿಯನ್ನು ಸುಟ್ಟು ಒಳಗಿರುವ ದುದ್ದೆ (ತಿರುಳು) ಯನ್ನು ಕುರುವಿನ ಕಟ್ಟಿದರೆ, ಕುರು ಒಡೆದು ನಂತರ ಮಾಯುತ್ತದೆ. (ವಾಸಿಯಾಗುತ್ತದೆ). |
| ಹೊಂಗೆಪಟ್ಟೆ (ಚಕ್ಕೆ), ನೇರಳೆ ಪಟ್ಟೆ( ಚಕ್ಕೆ) | ಎರಡನ್ನೂ ಸೇರಿಸಿ ಚೆನ್ನಾಗಿ ಜಜ್ಜಿ ಬರೀ (ಖಾಲಿ) ಹೊಟ್ಟೆಯಲ್ಲಿ ಕುಡಿದರೆ ಹೊಟ್ಟೆ ಕಳತ (ಭೇದಿ) ಗುಣವಾಗುತ್ತದೆ. |

ಮೂಲ: ಕ್ಷೇತ್ರಕಾರ್ಯ

ನಾಟಿ ವೈದ್ಯ ಪದ್ಧತಿಯ ಹುಟ್ಟಿಗೆ ಕಾರಣವನ್ನು ಶೋಧಿಸುತ್ತಾ ಹೋದುದ್ದೇ ಆದರೆ, ಇರುಳಿಗರು ದಟ್ಟ ಅರಣ್ಯಗಳ ಮದ್ಯೆ, ಅಷ್ಟೇ ಭಯಂಕರವಾಗಿರುವಂತಹ ಕಾಡು ಪ್ರಾಣಿಗಳ ನಡುವಿನ ಪರಿಸರದಲ್ಲಿ ಜೀವಿಸಬೇಕಾದರೆ; ಬಲಶಾಲಿಯಾಗಿರುವುದು ಹಾಗೂ ನಿರೋಗಿಯಾಗಿರುವುದು ಬಹುಮುಖ್ಯ ಹಾಗೂ ಅನಿವಾರ್ಯವಾಗಿದ್ದು, ಆದ್ದರಿಂದಲೇ ಈ ಇರುಳಿಗರು ತಮ್ಮ ನೋವು ಮತ್ತು ಹಲವಾರು ಕಷ್ಟಗಳ ನಿವಾರಣೆಗೆ ಅವರು ಏನಾದರೂ ಪ್ರಯತ್ನವನ್ನು ಮಾಡಿರಬೇಕು, ಉದಾಹರಣೆಗೆ ಗಾಯದ ಮೇಲೆ ಎಲೆಗಳನ್ನು ಅಂಟಿಸುವುದು, ಎಲೆಯನ್ನು ಜಜ್ಜಿ ಅದರ ರಸವನ್ನು ಹಾಕುವುದು, ಕ್ರಮೇಣ ಸುತ್ತ–ಮುತ್ತಲಿನ ಗಿಡಬಳ್ಳಿಗಳನ್ನೇ ಉಪಯೋಗಿಸಿಕೊಂಡು ತಮಗೆ ಬರುವಂತಹ ರೋಗ–ರುಜಿನಗಳನ್ನು ಪರಿಹರಿಸಿಕೊಂಡಿರುವ ಸಾಧ್ಯತೆಗಳೇ ಹೆಚ್ಚಿನದಾಗಿರುತ್ತದೆ. ಆದ್ದರಿಂದಲೇ, ಇಂತಹ ನಿರಂತರ ಸ್ವಯಂ ಪ್ರಾಯೋಗಿಕ ಪ್ರಯತ್ನಗಳು ನಿಧಾನವಾಗಿ ಹಾಗೂ ಕ್ರಮೇಣ ಒಂದು ನಿರ್ದಿಷ್ಟ ಜ್ಞಾನಕ್ಕೆ ಅವಕಾಶವನ್ನು ಮಾಡಿಕೊಟ್ಟಿರುತ್ತದೆ. ಆದರೆ, ಈ ಜ್ಞಾನದ ಉಗಮ ಒಂದೇ ದಿನದಲ್ಲಿ, ಒಂದೇ ವರ್ಷದಲ್ಲಿ ಹುಟ್ಟಿ ಬರಲಿಲ್ಲ. ಇದು ನೂರಾರು ವರ್ಷಗಳಿಂದ, ತಲೆಮಾರಿನಿಂದ ತಲೆಮಾರಿಗೆ ಬಂದಿರುವ ನಿರಂತರ ಪ್ರಯತ್ನಗಳ ದೇಶಿ ಸಂಶೋಧನಾ ಪ್ರಕ್ರಿಯೆಯು ನಂತರ ಈ ಜ್ಞಾನಕ್ಕೆ ಒಂದು ಖಚಿತತೆಯನ್ನು ಬುಡಕಟ್ಟು ಜನಾಂಗಗಳು ಕಂಡುಕೊಂಡಿವೆ. ಆ ನಂತರ ತಮ್ಮ ನಾಟಿವೈದ್ಯ ಪರಿಣಿತಿಯನ್ನು ತಮ್ಮದೇ ಕುಟುಂಬದ ಒಬ್ಬರಿಗೆ ಕಲಿಸುವ ಮೂಲಕ ಇದುವರೆಗೂ ಉಳಿಸಿ ಬೆಳೆಸಿಕೊಂಡು ಬರುವಂತೆ ಮಾಡಿರುವುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಸರಕಾರ ಹಾಗೂ ಸರಕಾರೇತರ ಸಂಸ್ಥೆಗಳು ಇರುಳಿಗರ ನಾಟಿ ವೈದ್ಯ ಸಂಸ್ಕೃತಿಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಸಹಾಯ ಇಂದಿಗೂ ಅದನ್ನು ಮುಂದುವರೆಸಿಕೊಂಡು ಬಂದಿರುವುದನ್ನು ಕಾಣಬಹುದು.

**ಉಪಸಂಹಾರ**

ಪ್ರಸ್ತುತ ನಾಟಿ ವೈದ್ಯ ಪದ್ಧತಿಯನ್ನು ಕಾಪಾಡುತ್ತಿರುವಂತಹ ಈ ಇರುಳಿಗ ವೈದ್ಯರನ್ನು ಅರಣ್ಯ ಇಲಾಖೆಯವರು ಈ ಸಮುದಾಯದ ಹಿರಿತನದ ಹಾಗೂ ತಜ್ಞತೆಯನ್ನು ಹೊಂದಿರುವಂತಹ ವ್ಯಕ್ತಿಗಳನ್ನು ಗುರುತಿಸಿ ಅವರನ್ನು ತಮ್ಮ ಜೊತೆ ಕಾಡಿಗೆ ಕರೆದುಕೊಂಡು ಹೋಗಿ ಅವರಿಂದ ಔಷಧಿ

ಸಸ್ಯಗಳನ್ನು ಶೋಧಿಸಿ ತಂದಿರುತ್ತಾರೆ. ಅವುಗಳನ್ನು ಅರಣ್ಯ ಇಲಾಖೆಯ ನರ್ಸರಿಯಲ್ಲಿ ಒಂದು ಪ್ರತ್ಯೇಕವಾದ ವಿಭಾಗ ಮಾಡಿ ಅವುಗಳನ್ನು ಸಂಗ್ರಹಿಸಿದ್ದಾರೆ. ಅವುಗಳ ಮೂಲಕ ಸರಕಾರವು ಅವರ ಸಂಸ್ಕೃತಿಗೆ ಪ್ರೋತ್ಸಾಹ ನೀಡುತ್ತಿರುವುದು ಕಂಡುಬರುತ್ತದೆ. ಈ ಮೂಲಕವಾಗಿ ಇವರ ಸಂಸ್ಕೃತಿಗೆ ಪ್ರೋತ್ಸಾಹ ಹಾಗೂ ಪ್ರೇರಣೆ ಆಗಿರುವುದನ್ನು ನಾವು ನೋಡಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಬೈರೇಗೌಡ ಎಂ. (1997). ಧರ್ಮಪುರಿಯಿಂದ ತಿರುನಲ್ವೇಲಿವರೆಗೆ (ತಮಿಳುನಾಡು ಜಾನಪದ ಪ್ರವಾಸ ಕಥನ), ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ಸಿದ್ದಲಿಂಗಯ್ಯ ಕಂಬಾಳ್.ಬಿ. (1993). ಇರುಳಿಗರ ಸಂಸ್ಕೃತಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- Ananthakrishna Iyer L.K. (1930). The Mysore Tribes and Castes (The Mysore University, Mysore. Mysore. Vol-III. P-378-94.
- Jakka Parthasarathy. (1999). Irular. *In* The Encyclopaedia of Dravidian Tribes, Ed: M. Menon ISDL, Thiruvananthapuram.
- Kuruva Basavaraju. (2000). Irularu. *In* Karnataka Budakattugalu, Ed. H. J. LakkappaGowda, Karnataka Janapada and Yakshgana Academy, Bangalore.
- Singh K. S. (1994). People of India. The Schedule Caste, Oxford University Press, New Delhi.